# ಮಾಸ ಭವಿಷ್ಯ

## ಮೇಷ



ಈ ತಿಂಗಳು ಆಕಾಶದೆತ್ತರಕ್ಕೆ ಹಾರುವ ಚೈತನ್ಯ ನಿಮ್ಮಲ್ಲಿ ಮೂಡಲಿದೆ. ಸಂಬಂಧಗಳನ್ನು ಅರ್ಥಮಾಡಿಕೊಳ್ಳುವ ಸಮಯ. ಕುಟುಂಬ ಮತ್ತು ವೃತ್ತಿಯ ಸಂಕೀರ್ಣ ಸಮಸ್ಯೆಗಳನ್ನು ಪರಿಹರಿಸುವಿರಿ.

ಶುಭ: 3, 4, 13, 16, 17

ಅಶುಭ: 14, 15, 20, 21, 22

## ವೃಷಭ



ಹಿಂದಿನದೆಲ್ಲವನ್ನು ಮರೆತು ಬಿಡಿ. ನೀವು ದೃಢವಾದ ಮತ್ತು ಮಹತ್ವಾಕಾಂಕ್ಷಿ ವ್ಯಕ್ತಿ ಎನ್ನುವುದನ್ನು ಮನಗಾಣಿ. ಷಡ್ಯಂತ್ರಗಳ ವಿರುದ್ಧ ದನಿ ಎತ್ತಿ. ಪ್ರತಿಭೆಗೆ ಸೂಕ್ತ ಅವಕಾಶಗಳಿದ್ದಾಗ ಬಳಸಿಕೊಳ್ಳಲು ಹಿಂಜರಿಯಬೇಡಿ.

ಶುಭ: 7, 8, 9, 15, 20

ಅಶುಭ: 1, 2, 22, 23, 26

## ಮಿಥುನ




ಸಂಬಂಧಗಳ ಸೂಕ್ಷ್ಮತೆಯನ್ನು ಅರ್ಥಮಾಡಿಕೊಳ್ಳುವ ಸಮಯವಿದು. ಜೀವನದಲ್ಲಿ ಪ್ರೀತಿಯ ಪಾತ್ರವನ್ನು ಸ್ಪಷ್ಟಪಡಿಸುವ ವಿಶಿಷ್ಟವಾದ ಅವಕಾಶ ನಿಮ್ಮೆದುರು ಬರಲಿದೆ. ಸಂಗಾತಿಯೊಂದಿಗೆ ಸೌಮ್ಯವಾಗಿ ವರ್ತಿಸಿ.

ಶುಭ: 4, 5, 14, 15, 16

ಅಶುಭ: 1, 2, 3, 26, 27

## ಕಟಕ



ಈ ತಿಂಗಳು ನೀವು ಹೆಚ್ಚು ಕ್ರಿಯಾಶೀಲರೂ, ಚಿಂತನಶೀಲರೂ ಆಗುವಿರಿ. ಸ್ನೇಹಿತರ–ಬಂಧುಗಳ ಕಷ್ಟಗಳಿಗೆ ಸ್ಪಂದಿಸುವಿರಿ. ಈವರೆಗೆ ನೀವು ಎದುರಿಸುತ್ತ ಬಂದಿರುವ ಸಮಸ್ಯೆಗಳನ್ನು ಜಯಿಸಲು ಸಾಧ್ಯವಾಗುವುದು.

ಶುಭ: 1, 2, 3, 4, 15

ಅಶುಭ: 11, 12, 13, 14

## ಸಿಂಹ



ವ್ಯಾವಹಾರಿಕ ಪ್ರತಿಭೆ ಬೆಳೆಸಿಕೊಳ್ಳಿ. ಅದೃಷ್ಟ ನಿಮ್ಮ ಪರವಾಗಿದೆ. ಯಾವುದೇ ಉದ್ಯಮಕ್ಕೆ ಕೈ ಹಾಕಿದರೂ ಗೆಲುವು. ಗ್ರಾಹಕರನ್ನು, ಮೇಲಧಿಕಾರಿಗಳನ್ನು, ಪ್ರೀತಿಪಾತ್ರರನ್ನು ಸುಲಭವಾಗಿ ಮೆಚ್ಚಿಸಬಹುದು.

ಶುಭ: 3, 4, 5, 8, 9

ಅಶುಭ: 18, 19, 20, 27

## ಕನ್ಯಾ



ಏನೇ ಮಾಡಿದರೂ ಯಶಸ್ಸು ಲಭಿಸಲಿದೆ. ಅನಿರೀಕ್ಷಿತ ಗೆಲುವಿನೊಂದಿಗೆ ಈ ತಿಂಗಳನ್ನು ಬರಮಾಡಿಕೊಳ್ಳಿ. ಆದರೆ ವಾಸ್ತವ ಮತ್ತು ಕಲ್ಪನೆಯ ನಡುವಿನ ವ್ಯತ್ಯಾಸ ತಿಳಿದಿರಲಿ. ಯೋಚಿಸಿ ನಿರ್ಧಾರ ತೆಗೆದುಕೊಳ್ಳಿ.

ಶುಭ: 11, 12, 13, 14, 15

ಅಶುಭ: 1, 2, 3, 18, 19